ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 57-64
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕನ್ನಡ ಚಲನಚಿತ್ರ ಗೀತೆಗಳು: ಒಂದು ಅಧ್ಯಯನ

**ಯಶೋಧ**[1] & **ಡಾ. ಜಯದೇವಿ ಜಂಗಮಶೆಟ್ಟಿ**[2]

[1]ಸಂಶೋಧನಾ ವಿದ್ಯಾರ್ಥಿ, ಸಂಗೀತ ಮತ್ತು ನೃತ್ಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
[2]ಸಹಾಯಕ ಪ್ರಾಧ್ಯಾಪಕರು, ಸಂಗೀತ ಮತ್ತು ಲಲಿತ ಕಲಾ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ.

***Abstract:***

*ಭಾರತೀಯ ಮತ್ತು ಕನ್ನಡ ಚಲನಚಿತ್ರರಂಗದ ವಿಶೇಷವಾದುದು ಚಲನಚಿತ್ರ ಗೀತೆಗಳು. ಸಂಗೀತವಿಲ್ಲದೆ ಚಲನಚಿತ್ರ ಗೀತೆಗಳನ್ನು ಗ್ರಹಿಸುವುದು ಮತ್ತು ಆಲಿಸುವುದು ತುಸು ಕಷ್ಟ. ಚಲನಚಿತ್ರ ಗೀತೆಗಳನ್ನು ಸಿದ್ಧಪಡಿಸುವ ಬರಹಗಾರರು, ಸಂಗೀತ ಸಂಯೋಜಕರು ಹಾಗೂ ಗಾಯಕರ ಶ್ರಮ ಅಪಾರವಾದುದು. ಚಲನಚಿತ್ರ ಗೀತೆಗಳಲ್ಲಿ ನಾಟಕದ ಹಾಡುಗಳು, ಪ್ರೇಮ, ವಿರಸ, ಸ್ನೇಹ, ದ್ವೇಷ, ಸಾವು, ನೋವು, ಭಕ್ತಿ–ವಾತ್ಸಲ್ಯ ಪ್ರಕೃತಿ ಹೀಗೆ ಎಲ್ಲಾ ಬಗೆಯ ಹಾಡುಗಳನ್ನು ಕಾಣಬಹುದಾಗಿದೆ. ಈ ಹಾಡುಗಳು ವ್ಯಕ್ತಿಯ ಭಾವನೆಗಳನ್ನು ಮಾತ್ರವಲ್ಲದೆ ವ್ಯಕ್ತಿತ್ವವನ್ನು ಬದಲಾಯಿಸುವಂತಹ ಶಕ್ತಿಯನ್ನು ಹೊಂದಿದೆ. ಈ ಗೀತೆಗಳು ಪ್ರೇಕ್ಷಕರಿಗೆ ಮನೋರಂಜನೆಯನ್ನು ನೀಡುವುದರ ಜೊತೆಗೆ ಜೀವನದ ಪಾಠಗಳನ್ನು, ನೈತಿಕ ಮೌಲ್ಯವನ್ನು ತಿಳಿಸುವಲ್ಲಿ ಯಶಸ್ಸನ್ನು ಕಂಡಿವೆ.*

***Keywords:*** *ಕನ್ನಡ ಚಿತ್ರರಂಗ, ಚಲನಚಿತ್ರ ಗೀತೆಗಳು, ಸಾಹಿತ್ಯ, ಸಂಗೀತ, ರಾಗಸಂಯೋಜನೆ.*

**ಪೀಠಿಕೆ**

ಚಲನಚಿತ್ರ ಗೀತೆಗಳು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಸಂಗೀತಮಯವಾಗಿ ರೂಪುಗೊಂಡು ಮತ್ತು ಜನಪ್ರಿಯಗೊಂಡು ಜನಮನವನ್ನು ರಂಜಿಸುವುದು ಅಭಿಮಾನದ ಸಂಗತಿಯಾಗಿದೆ. ಚಿತ್ರಗೀತೆಗಳು ಪೌರಾಣಿಕ, ಐತಿಹಾಸಿಕ, ಜನಪದೀಯ ಹಾಗೂ ಸಾಮಾಜಿಕ ಹೀಗೆ ಎಲ್ಲಾ ರೀತಿಯ ಚೌಕಟ್ಟನ್ನು ಮೀರಿ ಯಶಸ್ವಿಯಾಗಿ ದಾಖಲಾಗಿವೆ. ಹೀಗೆ ಯಶಸ್ವಿಯಾದ ಚಿತ್ರಗೀತೆಗಳ ಹಿಂದೆ ಅನೇಕರ ಪರಿಶ್ರಮ ಮತ್ತು ಆಸಕ್ತಿಯೂ ಇದೆ. ಇದರಲ್ಲಿ ಯಾರ ಪಾಲು ಹೆಚ್ಚು ಮತ್ತು ಕಮ್ಮಿ ಎಂದು ಹೇಳಲು ಸಾಧ್ಯವಿಲ್ಲ. ಗೀತೆಯ ಯಶಸ್ಸಿನ ಪಾಲುದಾರರಾದ ಗೀತರಚನಾಕಾರರು, ಸಂಗೀತ ಸಂಯೋಜಕರು ಮತ್ತು ಗಾಯಕರು ಇವರೆಲ್ಲರ ಪರಿಶ್ರಮದ ಫಲವಾಗಿ ಗೀತೆಗಳು ಹೊರಹೊಮ್ಮಿವೆ. ಇವರಲ್ಲಿ ಯಾರೊಬ್ಬರ ಆಸಕ್ತಿ ಕಡಿಮೆಯಾದರೂ ಚಿತ್ರಗೀತೆಗಳು ಯಶಸ್ಸು ಕಾಣವುದು ಕಷ್ಟ. ಅಂತಹ ಎಷ್ಟೋ ಉದಾಹರಣೆಗಳು ನಮ್ಮಲ್ಲಿವೆ. ಆದರೆ ಅದೃಷ್ಟವೆನ್ನುವಂತೆ ಕೆಲವು ಸಲ ಯಾವುದಾದರು ಒಂದು ಅಂಶದಿಂದ ಯಶಸ್ಸು ಕಂಡಿದ್ದುಂಟು. ಆದರೆ ಇವರೆಲ್ಲರ ಆಸಕ್ತಿಯಿಂದ ತಯಾರಾದ ಗೀತೆ ಎಂದೂ ಸೋತಿದ್ದಿಲ್ಲ. ಈ ಕಾರಣದಿಂದ ಗೀತೆಯ ಯಶಸ್ಸಿನ ಪಾಲು ಈ ಮೂವರಿಗೆ ಸಲ್ಲುತ್ತದೆ.

ಉತ್ತಮ ಸಾಹಿತ್ಯವಿಲ್ಲದೆ ಗೀತೆಗಳು ಬಹಳಕಾಲ ಉಳಿಯುವುದಿಲ್ಲ ಮತ್ತು ಉತ್ತಮ ಸಂಗೀತ ಸಂಯೋಜನೆ ಇಲ್ಲದೆ ಗೀತೆಗಳು ಯಶಸ್ಸು ಕಾಣುವುದು ಕಷ್ಟ. ಹಾಗೆ ಉತ್ತಮ ಕಂಠದಿಂದ ಹೊರ ಹೊಮ್ಮದ ಗೀತೆಗಳು ಜನರ ಮನವನ್ನು

***Please cite this article as:*** ಯಶೋಧ & ಜಯದೇವಿ ಜಂಗಮಶೆಟ್ಟಿ. (2023). ಕನ್ನಡ ಚಲನಚಿತ್ರ ಗೀತೆಗಳು: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 2(1), 57–64.

ತಲುಪುವುದು ಕೂಡ ಕಷ್ಟಕರವಾದ ಸಂಗತಿಯಾಗಿದೆ. ತೆರೆಯ ಹಿಂದಿನ ಇವರೆಲ್ಲರೂ ಶ್ರಮಿಸಿದರೆ, ತೆರೆಯ ಮೇಲೆ ಸನ್ನಿವೇಶಕ್ಕೆ ಪೂರಕವೆನ್ನುವ ಹಾಗೆ ನಟಿಸುವ ನಟರುಗಳು ಕೂಡ ಬಹುಪಾಲು ಚಿತ್ರಗೀತೆಗಳ ಗೆಲುವಿಗೆ ಕಾರಣರಾಗುತ್ತಾರೆ. ದೃಶ್ಯಕ್ಕೆ ಅಗತ್ಯ ವೆನ್ನುವಂತೆ ಹೊಂದಿಕೊಳ್ಳಬೇಕಾದರೆ ನಟರುಗಳು ಅದರಂತೆ ನಟಿಸುವುದು ಬಹುಮುಖ್ಯ. ಪ್ರೇಕ್ಷಕರು ತಮ್ಮ ನೆಚ್ಚಿನ ನಟರ ಹಾಡುಗಳನ್ನು ಕೇಳುವಾಗ ಮತ್ತು ನೋಡುವಾಗ ಅದರ ತೆರೆಮರೆಯಲ್ಲಿರುವ ರಚನಕಾರರು ಅರಿವಿಲ್ಲದೇ ಕೇವಲ ನಟರನ್ನು ಮಾತ್ರ ಪ್ರತಿನಿಧಿಸುತ್ತಾರೆ. ಈ ರೀತಿಯಲ್ಲಿ ಚಿತ್ರಗೀತೆಗಳು ಹಲವಾರು ಪ್ರತಿಭಾವಂತರ ಪರಿಶ್ರಮದಿಂದ ಕೇಳುಗರಿಗೆ ಮತ್ತು ನೋಡುಗರಿಗೆ ತಲುಪುವುದು ಒಂದು ಸಾಧನೆ. ಸಾವಿರಾರು ಸಂಖ್ಯೆಯಲ್ಲಿ ಹೊರಹೊಮ್ಮಿರುವ ಚಿತ್ರಗೀತೆಗಳು ಮಾನವನ ಭಾವನಾತ್ಮಕ ಎಲ್ಲಾ ಅಂಶಗಳನ್ನು ಮತ್ತು ಮನೋಧರ್ಮವನ್ನು ಒಳಗೊಂಡು (ಭಕ್ತಿ, ಪ್ರೇಮ, ಕೌಟುಂಬಿಕ, ಸಾಹಸ, ರೋಚಕ, ಹಾಸ್ಯ, ಪ್ರಕೃತಿ ಇತ್ಯಾದಿ) ಯಶಸ್ವಿಯಾಗಿವೆ.

ಚಲನಚಿತ್ರ ಗೀತೆಗಳಿಗೆ ಮಾತ್ರವಲ್ಲದೆ ಚಲನಚಿತ್ರದ ಇಡೀ ಚಲನೆಗೆ ಸಂಗೀತ ನಿರ್ದೇಶಕನ ಅವಶ್ಯಕತೆ ಇರುತ್ತದೆ. ಚಲನಚಿತ್ರ ಆರಂಭವಾಗುವುದೇ ಸಂಗೀತದಿಂದ. ಹತ್ತಾರು ವಾದ್ಯಗಳು ಮತ್ತು ಅದನ್ನು ನಟಿಸುವ ಕಲಾವಿದರು ನಿರಂತರವಾಗಿ ಮುಕ್ತಾಯದವರೆಗೂ ಅನಿವಾರ್ಯವಾಗಿರುತ್ತಾರೆ. ಇದನ್ನೆಲ್ಲಾ ನಿರ್ವಹಿಸಲು ಒಬ್ಬ ಸಂಗೀತ ನಿರ್ದೇಶಕನ ಅನಿವಾರ್ಯವೂ ಇಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಚಿತ್ರಕಥೆಯ ಸಾಹಿತ್ಯ ಸಂಭಾಷಣೆಯನ್ನು ಕೂಡ ಸಂಗೀತದೊಂದಿಗೆ ಅರ್ಥೈಸುವ ಕಾರ್ಯ ಇಲ್ಲಿ ಸಂಗೀತದ ಮಹತ್ವವನ್ನು ತಿಳಿಸುತ್ತದೆ. ಒಂದು ಕಾಲದಲ್ಲಿ ಮಾತು ಮತ್ತು ಸಾಹಿತ್ಯವಿಲ್ಲದ ಚಲನಚಿತ್ರಗಳಿಗೆ ಸಂಗೀತವೇ ಜೀವಾಳವಾಗಿತ್ತು. ಕೇವಲ ನಟನು ಅಭಿನಯಿಸುವುದನ್ನು ಮಾತ್ರ ನಿರ್ವಹಿಸುತ್ತಿದ್ದ ಚಲನಚಿತ್ರಗಳಲ್ಲಿ ಅವನ ಎಲ್ಲಾ ಅಭಿನಯದ ಭಾವನೆಗಳನ್ನು ನಿರ್ವಹಿಸುತ್ತಿದ್ದುದ್ದು ಸಂಗೀತ ಮಾತ್ರ. ಅದ್ದರಿಂದ ಶಬ್ದ-ಸಾಹಿತ್ಯಗಳನ್ನು ಮೀರಿ ಸಂವಹನ ಮಾಧ್ಯಮವಾಗುವ ಶಕ್ತಿ ಸಂಗೀತಕ್ಕಿದೆ.

ಚಲನಚಿತ್ರದ ಭಿನ್ನ-ಭಿನ್ನ ಸಮಯ ಮತ್ತು ಸನ್ನಿವೇಶಗಳಲ್ಲಿ, ಹಿನ್ನೆಲೆ ಸಂಗೀತ ಕೆಲವೊಮ್ಮೆ ತುಂಬಾ ಪ್ರಧಾನವಾಗಿ ಸಂಯೋಜಿಸಲ್ಪಡುತ್ತದೆ. ಮಾತುಗಳಿಲ್ಲದ ಸಂದರ್ಭದಲ್ಲಿ ಮೌನವನ್ನು ಅರ್ಥೈಸುವ ಕಾರ್ಯವನ್ನು ಸಂಗೀತ ನಿರ್ವಹಿಸುತ್ತದೆ. ಇಂತಹ ಸಂದರ್ಭಗಳಲ್ಲಿ ಸಂಗೀತ ನಿರ್ವಹಿಸುವುದು ಒಬ್ಬ ಶ್ರೇಷ್ಠ ಸಂಗೀತ ನಿರ್ದೇಶಕನಿಗೆ ಮಾತ್ರಸಾಧ್ಯ. ಇವರ ಸಂಗೀತ ಸಂಯೋಜನೆಯು ಕೆಲವು ಸನ್ನಿವೇಶಗಳನ್ನು ಅದ್ಭುತ ಎನ್ನುವಂತೆ ಕಾಣಿಸಲು ಸಹಾಯವಾಗುತ್ತದೆ. ಅಲ್ಲದೇ ಕೆಲವೊಂದು ಚಲನಚಿತ್ರಗಳು ಸಂಗೀತ ಪ್ರಧಾನವಾಗಿ ಮತ್ತು ಸಂಗೀತವೇ ಚಲನಚಿತ್ರದ ಜೀವಾಳವಾಗಿ ತಯಾರಾಗುವ ಸಂಧರ್ಭಗಳಲ್ಲಿ, ಸಂಗೀತ ನಿರ್ದೇಶಕರ ಸಂಗೀತ ಪ್ರತಿಭೆಯನ್ನು ತೋರಿಕೊಳ್ಳಲು ಒಂದು ಅದ್ಭುತ ವೇದಿಕೆಯಂತೆ ರೂಪುಗೊಳ್ಳುತ್ತದೆ. ಮತ್ತು ಇಲ್ಲಿ ಸಂಯೋಜಕರು ತುಂಬಾ ಎಚ್ಚರವಹಿಸಿ ರಾಗ ಸಂಯೋಜನೆಗಳನ್ನು ನಿರ್ವಹಿಸಬೇಕಾಗುತ್ತದೆ. ಇಂತಹ ಸಂಗೀತ ನಿರ್ದೇಶಕರು ಸಾಮಾನ್ಯ ಎನ್ನಿಸುವ ಚಲನಚಿತ್ರ ಕಥೆಗಳನ್ನು ಮತ್ತು ಸಾಮಾನ್ಯ ಸಾಹಿತ್ಯ ಹೊಂದಿದ ಚಲನಚಿತ್ರ ಗೀತೆಗಳನ್ನು ತಮ್ಮ ಶ್ರಮದಿಂದ ಉನ್ನತೀಕರಿಸಿ, ಸಂಗೀತದಿಂದ ಯಶಸ್ವಿಗೊಳಿಸುವ ಅದ್ಭುತ ಕಾರ್ಯಗಳು ನಡೆದಿವೆ.

ಪ್ರಾರಂಭದ ಚಲನಚಿತ್ರಗಳಲ್ಲಿ ಶಾಸ್ತ್ರೀಯ ಸಂಗೀತ ಬಲ್ಲವರು ಸಂಗೀತ ನಿರ್ದೇಶನವನ್ನು ನಿರ್ವಹಿಸುತ್ತಿದ್ದರಿಂದ ಗೀತೆಗಳು ಶಾಸ್ತ್ರೀಯ ಧಾಟಿಯಲ್ಲಿ ಮೂಡಿಬಂದವು. ಪೌರಾಣಿಕ, ಭಕ್ತಿಪ್ರಧಾನ, ಐತಿಹಾಸಿಕ ಹಾಗೂ ಸ್ವಲ್ಪ ದಿನಗಳ ನಂತರದಲ್ಲಿ ಬಂದ ಸಾಮಾಜಿಕ ಇತ್ಯಾದಿ ಚಲನಚಿತ್ರಗಳಲ್ಲಿಯೂ ಶಾಸ್ತ್ರೀಯ ಸಂಗೀತವನ್ನು ಆಧಾರವಾಗಿಟ್ಟುಕೊಂಡು ಸಂಯೋಜಿಸಲಾದವು.

ಆದ್ದರಿಂದ ಅಂದಿನ ಚಲನಚಿತ್ರಗಳು ಮತ್ತು ಗೀತೆಗಳಲ್ಲಿ ಶುದ್ದ ರಾಗ ಸಂಯೋಜನೆಗಳನ್ನು ಇಂದಿಗೂ ಸ್ಮರಿಸಬಹುದು. ಅಂತಹ ಸಂದರ್ಭದಲ್ಲಿ ಮಾತಿನ ಚಿತ್ರಗಳಲ್ಲಿ, ಮಾತು ಮುಖ್ಯವಾಗಿರುವ ಹೊತ್ತಿನಲ್ಲಿ ಸಂಗೀತವು ಅದರ ಜೊತೆಗೆ ಬೆಳೆಯಿತು. "ರಾಗ ಸಂಯೋಜನೆ"ಯು ಚಲನಚಿತ್ರದ ಮುಖ್ಯ ಅಂಗ ಎಂಬ ನೆಲೆಯಲ್ಲಿ ರೂಪುಗೊಂಡ ಈ ಪ್ರಯತ್ನ ಸರಳವಾದ ಸಂಗತಿಯಲ್ಲ. ಚಲನಚಿತ್ರಗಳು ಕಾಲದಿಂದ ಕಾಲಕ್ಕೆ ಬದಲಾದಂತೆ ಗೀತ ಸಂಯೋಜನೆಗಳೂ ಬದಲಾದವು. ಈ ಬದಲಾವಣೆಯಿಂದ ಸಂಗೀತ ನಿರ್ದೇಶಕರ ಜವಾಬ್ಧಾರಿಗಳು ಎದುರಾದವು. ಈ ಸಮಯಗಳನ್ನು ದಾಟಿ, ಜನರನ್ನು ರಂಜಿಸಿ ಇಂದಿಗೂ ಗುನುಗುವಂತೆ, ಮಾಧುರ್ಯ ಪೂರ್ಣವಾಗಿ ಬೆಳೆದಿರುವುದು ಗಮನಾರ್ಹವಾಗಿದೆ.

'ಹಾಡು ಹಳೇಯದಾದರೇನು ಭಾವ ನವನವೀನ' ಈ ಗೀತೆಯ ಸಾಲು ನೂರಕ್ಕೆ ನೂರರಷ್ಟು ನಿಜ ಎನ್ನುವಂತೆ ಉತ್ತಮ ರಾಗ ಸಂಯೋಜನೆಯನ್ನು ಮತ್ತು ಸಾಹಿತ್ಯವನ್ನು ಹೊಂದಿದ ಗೀತೆಗಳು ಈಗಲೂ ಜನಮನದಲ್ಲಿ ಹಚ್ಚ–ಹಸಿರಾಗಿರುವುದು ಒಪ್ಪಲೇಬೇಕಾದ ಸಂಗತಿ. ಸದಾ ಹೊಸ–ಹೊಸ ಪ್ರಯೋಗಗಳಿಂದ ಗೀತೆಗಳಿಗೆ ರಾಗ ಸಂಯೋಜನೆಯನ್ನು ನೀಡುತ್ತಾ ಹಾಗೂ ಜೀವ ಮತ್ತು ಭಾವವನ್ನು ತುಂಬುವ ಸಂಗೀತ ನಿರ್ದೇಶಕನ ಮಹತ್ವವನ್ನು ಇಲ್ಲಿ ಸ್ಮರಿಸುವುದು ಅಗತ್ಯ.

"ಕನ್ನಡ ಸಿನಿಮಾ ಹೀಗೆ ಅವಿನಾಭಾವ ಸಂಬಂಧವನ್ನು ಸಂಗೀತದೊಂದಿಗೆ ತನ್ಮೂಲಕ ಚಿತ್ರಗೀತೆಗಳೊಂದಿಗೆ ಉಳಿಸಿಕೊಂಡು ಬಂದಿದೆ. ಹಲವಾರು ಶ್ರೇಷ್ಠ ಸಂಗೀತ ನಿರ್ದೇಶಕರು ಕನ್ನಡ ಸಿನಿಮಾ ಜಗತ್ತಿನಲ್ಲಿ ದಾಖಲಾಗಿದ್ದಾರೆ. ಈ ದೇಶದ ಹೆಸರಾಂತ ಸಂಗೀತ ಕಲಾವಿದರಾದ ಬಾಲಮುರಳಿಕೃಷ್ಣ ಅವರು ಕನ್ನಡದ ಹಂಸಗೀತೆ ಮತ್ತು ಸಂಧ್ಯಾರಾಗ ಸಿನಿಮಾಗಳಿಗೆ ಸಂಗೀತ ನಿರ್ದೇಶಿಸಿದ್ದಾರೆ, ಎನ್ನುವುದು ಮಹತ್ವದ ನೆಲೆಯಲ್ಲಿಯೂ ಗ್ರಹಿಸಲು ಸಾಧ್ಯವಿದೆ ಮತ್ತು ಸಿನಿಮಾ ಒಂದು ಯಶಸ್ಸಿನ ಮಾಧ್ಯಮ ಎಂಬ ಮಾತಿಗೂ ಪ್ರೇರಕಾಗಿದೆ.

ಸಂಗೀತ ನಿರ್ದೇಶಕರನ್ನೇ ಗಮನಿಸಿಕೊಂಡು ಹೇಳುವ ಹೊತ್ತಿಗೆ ಕನ್ನಡ ಸಿನಿಮಾ ನಿಜಕ್ಕೂ ಹಲವು ಸಾಧನೆಗಳನ್ನು ತನ್ನದಾಗಿಸಿಕೊಂಡಿದೆ. ಅಪರೂಪವೆನ್ನುವ ಅದೆಷ್ಟೋ ಗೀತೆಗಳು ಜನ ಮನದಲ್ಲಿ ದಾಖಲಾಗಿವೆ. ಇಂದಿಗೂ ಹಳೆಯ – ಹೊಸತೆನ್ನುವ, ಬೇಧವಿಲ್ಲದೆ ರಾಗಗಳು ಜನರನ್ನು ನಿರಂತರತೆಯ ಅರ್ಥದಿಂದಲೂ ಕಲಕಿವೆ. ಉತ್ತಮ ಗೀತೆಗಳು ರಚನೆಯಾಗಿರುವುದು ಎಷ್ಟು ನಿಜವೊ ಅಷ್ಟೇ ಅತ್ಯುತ್ತಮವಾದ ರಾಗ ಸಂಯೋಜನೆಯ ಗೀತೆಗಳು ತಮ್ಮೊಂದಿಗೆ ಸಿನಿಮಾಗಳನ್ನು, ನಟರನ್ನು, ನಿರ್ದೇಶಕರನ್ನು ಇಂದಿಗೂ ಜೀವಂತವಾಗಿ ಉಳಿಸಿಕೊಂಡಿವೆ. ಮಾಧ್ಯಮಕ್ಕೆ ಸೋಲಿಲ್ಲ, ಸಾವಿಲ್ಲವೆಂಬ ಸತ್ಯವನ್ನು ಸಾರಿವೆ."[1] ಪ್ರಶಾಂತ ನಾಯಕ ರವರ ಈ ಹೇಳಿಕೆಯಂತೆ ಕನ್ನಡ ಚಲನಚಿತ್ರಗಳಲ್ಲಿ ಶಾಸ್ತ್ರೀಯ ಸಂಗೀತಗಾರರ ಮತ್ತು ಅನೇಕ ಮಹನೀಯರ ಒಡನಾಟದಿಂದ ಮೂಡಿಬಂದಿರುವ ಕೆಲ ಸಂಗೀತ ಆಧಾರಿತ ಸಿನಿಮಾಗಳನ್ನು ನಿರ್ಮಿಸಿ ಶಾಸ್ತ್ರೀಯ ಸಂಗೀತದ ಮಹತ್ವವನ್ನು ಜನರಿಗೆ ಮತ್ತು ಸಂಗೀತ ಪ್ರೀಯರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ. ಹಾಗೆ ಹಲವಾರು ಶ್ರೇಷ್ಠ ಸಂಗೀತಗಾರರು ಶಾಸ್ತ್ರೀಯ ಸಂಗೀತ ಆಧಾರಿತ ಗೀತೆಗಳನ್ನು ಸಂಯೋಜಿಸಿ, ಶಾಸ್ತ್ರೀಯ ಸಂಗೀತ ಮತ್ತು ಚಲನಚಿತ್ರ ಸಂಗೀತದ ಸಂಬಂಧವು ಅವಿನಾಭಾವವಾಗಿ ಬೆಳೆದು ಬಂದಿದೆ ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ.

ಗೀತೆಗಳನ್ನು ಕೇಳುವ ಜನರು ಸಂಯೋಜನೆಯನ್ನು ಗಮನಿಸಿ ಸಂಗೀತ ನಿರ್ದೇಶಕರನ್ನು ಸ್ಮರಿಸಿದರೆ, ಗೀತೆಯೊಂದಿಗೆ ಮೂಡಿ ಬರುವ ದೃಶ್ಯವನ್ನು ಕಂಡಾಗ ಸಂಗೀತ ನಿರ್ದೇಶಕರನ್ನು ತುಸು ಪಕ್ಕದಲ್ಲಿರಿಸಿ ನಟ–ನಟಿಯರ ಅಭಿನಯ ಅಲ್ಲಿ ಮೂಡಿಬರುವ ಸನ್ನೀವೇಶಗಳಿಗೆ

ಮಾರುಹೋಗಿ ಕೆಲವೊಮ್ಮೆ ಗೀತೆಗಳನ್ನು ಗಮನಿಸುವುದು ಕಡಿಮೆ, ಅಂತಹ ಹೊತ್ತಿನಲ್ಲಿಯೂ ಉತ್ತಮ ಗೀತೆಗಳು–ಸಂಗೀತ ಜನ–ಮನದಲ್ಲಿ ದಾಖಲಾಗಿ ಇಂದಿಗೂ ಹಳೆಯ ಮತ್ತು ಹೊಸ ಗೀತೆಗಳು ನಿರಂತರವಾಗಿ ಚಲನಚಿತ್ರದ ಎಲ್ಲಾ ಪಾತ್ರಗಳನ್ನು ಜೀವಂತವಾಗಿರಿಸಿವೆ. ಮತ್ತು ಚಲನ ಚಿತ್ರಗೀತೆಗಳು ಶಾಸ್ತ್ರೀಯ ರಾಗಗಳೊಂದಿಗೆ, ಹೊಸ ಹೊಸ ಆವಿಸ್ಕಾರಗಳೊಂದಿಗೆ, ಮಾಧುರ್ಯದೊಂದಿಗೆ ಎಂದಿಗೂ ಅಳಿಯದ ಇತಿಹಾಸವಾಗಿ ಉಳಿದಿದೆ ಎಂಬುದನ್ನು ಇಲ್ಲಿ ಒಪ್ಪಿಕೊಳ್ಳಬೇಕಿದೆ.

ತನ್ನದೇ ಒಂದು ಭಿನ್ನ ಸಂಗೀತ ಪ್ರಕಾರವಾಗಿ ರೂಪುಗೊಂಡಿರುವ ಚಲನಚಿತ್ರ ಗೀತೆಗಳು ಶಾಸ್ತ್ರೀಯ ಸಂಗೀತದ ರಾಗಗಳನ್ನು ಹೊರತುಪಡಿಸಿಲ್ಲ, ಎಲ್ಲಾ ಸಂಗೀತದಮೂಲ 'ರಾಗ'. ಹೀಗಾಗಿ ನೂರಾರು ರಾಗಗಳಲ್ಲಿ ಸಾವಿರಾರು ಕನ್ನಡ ಚಿತ್ರಗೀತೆಗಳು ಮೂಡಿಬಂದಿವೆ. ಅದರಲ್ಲಿ ಕೆಲವು ಶಾಸ್ತ್ರೀಯ ಸಂಗೀತ ಬಲ್ಲ ಸಂಗೀತ ನಿರ್ದೇಶಕರು ಮತ್ತು ಅದರ ಬಗ್ಗೆ ಆಸಕ್ತಿ ಹೊಂದಿರುವ ಕೆಲವು ಸಂಗೀತ ನಿರ್ದೇಶಕರು ಶಾಸ್ತ್ರೀಯ ಸಂಗೀತದ ಗೀತ ಪ್ರಕಾರಗಳನ್ನು ಹೋಲುವಂತೆ ಉತ್ತಮ ಸ್ವರ ಸಂಯೋಜನೆಗಳನ್ನು ಜೋಡಿಸಿ ಸಂಯೋಜಿಸಿರುವ ಗೀತೆಗಳು ಕನ್ನಡ ಚಲನಚಿತ್ರ ಗೀತೆಗಳ ಗರಿಮೆಯನ್ನು ಹೆಚ್ಚಿಸಿವೆ. ಇಂತಹ ಗೀತೆಗಳನ್ನು ಸಂಯೋಜಿಸಿದ ಸಂಗೀತ ನಿರ್ದೇಶಕರನ್ನು ಇಲ್ಲಿ ಕಾಣಬಹುದು. ಆರ್. ನಾಗೇಂದ್ರರಾಯರು, ಹಾರ್ಮೋನಿಯಮ್ ಶೇಷಗಿರಿರಾಯರು, ಹೆಚ್.ಆರ್.ಪದ್ಮನಾಭಶಾಸ್ತ್ರೀಗಳು, ಪಿ.ಕಾಳಿಂಗರಾಯರು, ಪಿ.ಶಾಮಣ್ಣ, ರಾಜನ್–ನಾಗೇಂದ್ರ, ಟಿ.ಜಿ.ಲಿಂಗಪ್ಪ, ಎಂ.ರಂಗರಾವ್, ಜಿ.ಕೆ.ವೆಂಕಟೇಶ್, ಸತ್ಯಂ, ವಿಜಯ ಭಾಸ್ಕರ್, ಹಂಸಲೇಖ, ಇಳಯರಾಜ ಮುಂತಾದವರು.

ಸಂಗೀತದ ಅವಶ್ಯಕತೆ ಮತ್ತು ಸಂಗೀತ ನಿರ್ದೇಶಕರನ್ನು ಕುರಿತು ಡಾ.ನಾಗೇಂದ್ರರವರು ತಮ್ಮ 'ಸಿನಿಮಾಜಗತ್ತು' ಎಂಬ ಕೃತಿಯಲ್ಲಿ ಈ ರೀತಿ ವಿವರಿಸಿದ್ದಾರೆ. "ಕೆಲವು ಸಂಗೀತ ನಿರ್ದೇಶಕರು ಭಾರತೀಯ ಸಂಗೀತವನ್ನೆ ಬಳಸಿ ಮತ್ತು ಶಾಸ್ತ್ರೀಯ ರಾಗವನ್ನು ಬಳಸಿ ಸಂಗೀತ ನೀಡುತ್ತಾರೆ. ಹೆಚ್ಚು ಜನಪ್ರಿಯ ಸಂಗೀತ ನಿರ್ದೇಶಕರು ಭಾರತೀಯ ಮತ್ತು ಪಾಶ್ಚಿಮಾತ್ಯ ಸಂಗೀತವನ್ನು ಸಂಯೋಜಿಸಿ, ಹೊಸ ಹೊಸ ರೀತಿಯಲ್ಲಿ ಪ್ರಯೋಗವನ್ನು ಮಾಡುತ್ತಾರೆ. ಹೆಚ್ಚು ಜನಪ್ರಿಯರಾಗಿ ಯಶಸ್ಸು ಗಳಿಸಿದ ಸಂಗೀತ ನಿರ್ದೇಶಕರು ಹೆಚ್ಚು ಕಲಾವಿದರನ್ನು ಬಳಸಿಕೊಂಡು ಸಂಗೀತ ನಿರ್ಮಾಣ ಮತ್ತು ಮುದ್ರಣ ಮಾಡುತ್ತಾರೆ.

ಸಂಗೀತವು ಚಲನಚಿತ್ರಗಳಿಗೆ ಅತ್ಯಂತ ಅವಶ್ಯಕ ವಾಗಿ ಬೇಕಾಗಿರುವಂತದ್ದಾಗಿದೆ. ಚಲನಚಿತ್ರಗಳಿಗೂ ಮತ್ತು ಸಂಗೀತಕ್ಕೂ ಒಂದು ವಿಶಿಷ್ಟವಾದ ಸಂಬಂಧವಿದೆ. ಸಂಗೀತದಿಂದ ಚಲನಚಿತ್ರದ ಆಶಯಗಳು ಮತ್ತು ಭಾವಗಳ ಪರಿಣಾಮಗಳನ್ನು ಮಾತ್ರ ಪ್ರತಿಬಿಂಬಿಸುವುದಿಲ್ಲ. ಚಲನಚಿತ್ರಗಳನ್ನು ಜನಪ್ರಿಯತೆಗೊಳಿಸುವ ಸಾಧನವಾಗಿರುತ್ತದೆ. ಚಲನಚಿತ್ರಗಳಲ್ಲಿ ಸಂಗೀತದ ಪ್ರಾಮುಖ್ಯತೆಯು ದೃಶ್ಯದ ಮಹತ್ವವನ್ನು ಹೆಚ್ಚಿಸಲು ಮತ್ತು ಗೀತೆಗಳಿಗಾಗಿಯೆ ವಿಶೇಷವಾಗಿ ಸಂಯೋಜನೆ ಮಾಡುವ ಸಂಗೀತವಾಗಿರುತ್ತದೆ. ಇಂದು ಭಾರತೀಯ ಚಿತ್ರರಂದಲ್ಲಿ ಗೀತೆಗಳಿಗಾಗಿ ವಿಶೇಷವಾಗಿ ಸಂಯೋಜನೆಗೋಳ್ಳುವ ಸಂಗೀತವು ಹೆಚ್ಚು ಮಹತ್ವವನ್ನು ಪಡೆದುಕೊಂಡಿರುವುದರ ಜೊತೆಗೆ ಚಿತ್ರ ನಿರ್ಮಾಣದಲ್ಲಿ ಅವಶ್ಯವಾಗಿ ಬೇಕಾಗಿರು ವಂತಹದ್ದಾಗಿದೆ. ಪಾಶ್ಚಾತ್ಯ ಸಂಗೀತ ವಿಮರ್ಶಕ ಡೇವಿಡ್ ರಾಕ್ಕಿನ್ ಪ್ರಕಾರ ಸಂಗೀತವು ಒಂದು ಚಿತ್ರದ ಅರ್ಥವಂತಿಕೆಯನ್ನು ಹೆಚ್ಚಿಸುತ್ತದೆಯಲ್ಲದೇ ಚಿತ್ರದ ಆಶಯಗಳನ್ನು ಗ್ರಹಿಸಲು ನೆರವಾಗುವ ಸಾಧನವಾಗಿದೆ. ಚಿತ್ರದ ನಾಟಕೀಯತೆಯನ್ನು ಮತ್ತು ಭಾವನಾತ್ಮಕ ಅಂಶಗಳನ್ನು ಸಂಗೀತದಿಂದ ತಿಳಿಯಲು ಸಾಧ್ಯವಾಗುತ್ತದೆ. ನೋಡುಗನಿಗೆ ಆಸಕ್ತಿಯನ್ನು ಹೆಚ್ಚಿಸುತ್ತದೆ. ಆದ್ದರಿಂದ ಭಾವುಕತೆಯನ್ನು ಮೂಡಿಸಲು ಸಾಧ್ಯವಾಗುತ್ತದೆ ಎಂದಿದ್ದಾರೆ."[2]

ನಾಗೇಂದ್ರರವರ ಈ ಮೇಲಿನ ಹೇಳಿಕೆಯಂತೆ ಕೆಲವು ಪ್ರಸಿದ್ದ ಸಂಗೀತ ನಿರ್ದೇಶಕರು ಶಾಸ್ತ್ರೀಯ ಸಂಗೀತವನ್ನು ಬಳಸಿಕೊಂಡು ಗೀತೆಗಳಿಗೆ ರಾಗ ಸಂಯೋಜನೆ ಮಾಡಿದ್ದಾರೆ. ಮೊದಲು ಚಿತ್ರಗೀತೆ ಗಳನ್ನು ನಿರ್ದೇಶಿಸಿದ ಎಲ್ಲಾ ಸಂಗೀತ ಸಂಯೋಜಕರು ಶಾಸ್ತ್ರೀಯ ಸಂಗೀತವನ್ನು ಬಲ್ಲವರಾಗಿರುತ್ತಿದ್ದರು, ಆದ್ದರಿಂದ ಅಲ್ಲಿ ಶಾಸ್ತ್ರೀಯತೆ ಯನ್ನು ಚಿತ್ರಗೀತೆಗಳಲ್ಲಿ ತುಂಬುವುದರ ಮೂಲಕ ಜನಪ್ರಿಯರಾಗಿದ್ದರೆಂದು ಹೇಳುವ ಹೇಳಿಕೆ ಒಪ್ಪುವಂತದ್ದು.

ಹಾಗೆ ಚಲನಚಿತ್ರಗಳಿಗೆ ಮಾತು ಬಂದಾಗಿನಿಂದ ಮತ್ತು ಮೊದಲು ಸಂಗೀತ ಬಹಳ ಅವಶ್ಯವಾಗಿತ್ತು ಎಂಬುದು ಸತ್ಯ. ಮೂಕಿ ಯುಗದಲ್ಲಿ ಸಂಗೀತದ ವಾದ್ಯಗಳಿಂದ ಭಾವವನ್ನು ವ್ಯಕ್ತಪಡಿಸಿದರೆ, ಮಾತು ಬಂದಾಗಿನಿಂದ ಗೀತೆಗಳ ಮೂಲಕ ಪರಿಣಾಮಕಾರಿ ಯಾದ ಸಂಗೀತ ಸಂಯೊಜನೆಯ ಮೂಲಕ ಭಾವನೆಯನ್ನು ವ್ಯಕ್ತಪಡಿಸಲಾಗುತ್ತದೆ. ಸಂಗೀತವು ಬರಿ ಗೀತೆಗಳಲ್ಲದೆ ಚಿತ್ರದ ದೃಶ್ಯಗಳು, ಸಂಧರ್ಭಗಳು ಮತ್ತು ಮೌನದ ಸಮಯದಲ್ಲೂ ಚಿತ್ರವನ್ನು ಅರ್ಥೈಸುವಂತೆ ಮಾಡುತ್ತದೆ. ಸಂಗೀತ ದಿಂದಲೆ ಎಷ್ಟೋ ಚಿತ್ರಗಳು ಯಶಸ್ವಿಯಾಗಿವೆ.

ಚಲನಚಿತ್ರಗಳ ನಾದ ಮತ್ತು ಮಾಧುರ್ಯದ ಜಗತ್ತು ಒಂದು ವಿಶೇಷ. ನಾದ ಲೋಕವನ್ನು ಆಸ್ವಾದಿಸುವ, ಕೇಳುವ ವರ್ಗಗಳಿಂದ ಇಂದು ಈ ಜಗತ್ತು ಹೆಮ್ಮರವಾಗಿ ಬೆಳೆದು ನಿಂತಿದೆ. ಇಂತಹ ವಿಸ್ಮಯ ಜಗತ್ತಿನಲ್ಲಿ ಗೀತ ರಚನಾಕಾರರು, ಸಂಗೀತ ನಿರ್ದೇಶಕರು ಮತ್ತು ಗಾಯಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಭಾರತೀಯ ಚಲನಚಿತ್ರಗಳಿಗೆ ಚಿತ್ರಗೀತೆಗಳು ಅನಿವಾರ್ಯ ಎನ್ನುವ ಸಾಕಾರದಿಂದ ಅವರ ಪ್ರತಿಭೆ ಹೊರಹೊಮ್ಮಿವೆ. ಈ ನಿಟ್ಟಿನಲ್ಲಿ ಹಿನ್ನೆಲೆ ಗಾಯನ ಪರಂಪರೆಯನ್ನು ಗಮನಿಸುವುದಾರೆ, ಹಿನ್ನೆಲೆ ಗಾಯಕರ ಪರಂಪರೆ ಇಂದು ಅತ್ಯಂತ ವಿಶಾಲವಾಗಿದೆ. ರಂಗಭೂಮಿಯಿಂದಲೆ ಈ ಪರಂಪರೆ ಬೆಳೆದು ಬಂದಿದೆ. ರಂಗಭೂಮಿಯ ಪ್ರೇರಣೆಯಿಂದ ಹಿನ್ನೆಲೆ ಗಾಯನ ಚಲನಚಿತ್ರಗಳಲ್ಲಿ ಆರಂಭವಾಯಿತು. ಕನ್ನಡ ಚಿತ್ರರಂಗದ ಆರಂಭದಲ್ಲಿ ಗಾಯಕರನ್ನು ಹುಡುಕುವುದು ಸಾಹಸವಾಗಿತ್ತು. ಅನಿವಾರ್ಯವಾಗಿ ಚಲನಚಿತ್ರದ ನಟರುಗಳೆ ನಟನೆಯ ಜೊತೆಗೆ ಗಾಯನವನ್ನು ಮಾಡಬೇಕಿತ್ತು. ಆ ಸಂದರ್ಭದಲ್ಲಿ ಸುಬ್ಬಯ್ಯ ನಾಯ್ಡು, ನಾಗೇಂದ್ರರಾಯರು, ಹೊನ್ನಪ್ಪ ಭಾಗವತರು, ಅಶ್ವತ್ಥಾಮ ಲಕ್ಷ್ಮೀಬಾಯಿ ಮೊದಲಾದ ಗಾಯಕರು ಶ್ರಮಿಸಿದರು. ಇಂದಿನ ಸಿನಿಮಾ ಸಂಗೀತ ಮಹತ್ತರವಾಗಿ ಬೆಳೆದು ಬಂದ ಸಾಧನೆಗಳಲ್ಲಿ ಬಹಪಾಲು ಹಿನ್ನೆಲೆ ಗಾಯಕರ ಶ್ರಮದಿಂದ. ಇದರಲ್ಲಿ ಸಂಗೀತ ನಿರ್ದೇಶಕರ ಪಾತ್ರವೂ ಇದ್ದರು ಸಹ ಅವರ ಸಂಯೋಜನೆಯನ್ನು ತಮ್ಮ ಸಂಗೀತ ಪ್ರಜ್ಞೆ ಮತ್ತು ಸುಮಧುರ ಕಂಠದ ರಾಗಾಲಾಪನೆ, ಸ್ವರ ಪ್ರಸ್ತಾರ, ಗಮಕಗಳಿಂದ ಸಾಹಿತ್ಯಕ್ಕೆ ಭಾವವನ್ನು ತುಂಬಿ ಜೀವ ನೀಡುವುದು ಗಾಯಕರು. ಗೀತೆಗಳು ಸಂಯೋಜನೆಗೊಂಡ ರಾಗವನ್ನು ಶಾಸ್ತ್ರೀಯತೆಯ ಚೌಕಟ್ಟನ್ನು ಮತ್ತು ಹಲವಾರು ಸಂಗೀತದ ಸಂಗತಿಗಳನ್ನು ಬಳಸಿ ರಾಗದ ಮಾಧುರ್ಯವನ್ನು ಕಾಪಾಡಿಕೊಳ್ಳುವುದೆ ಗಾಯಕರ ಹಿರಿಮೆ.

ಕನ್ನಡ ಚಿತ್ರರಂಗ ಆರಂಭದಿಂದಲೂ ಹಿನ್ನೆಲೆ ಗಾಯಕರ ಕೊರತೆಯನ್ನು ಅನುಭವಿಸುತ್ತಿದೆ. ಈ ಕೊರತೆಯನ್ನು ಬೇರೆ ಭಾಷೆಯ ಗಾಯಕರು ನೀಗಿಸುತ್ತಾ ಬಂದಿದ್ದಾರೆ. ಈ ಕುರಿತು ಜಿ.ಪ್ರಶಾಂತ್ ನಾಯಕರವರು ತಮ್ಮ 'ಕನ್ನಡ ಸಿನಿಮಾಲೋಕ' ಕೃತಿಯಲ್ಲಿ ವಿವರಿಸಿದ್ದಾರೆ. "ಇದೊಂದು ವಿಚಿತ್ರ ಆದರೂ ಸತ್ಯ. ಕನ್ನಡ ತನ್ನ ನೆಲದಲ್ಲಿ ಅದೆಷ್ಟೋ ಸಾಧನೆಗಳನ್ನು, ಪ್ರತಿಭೆಗಳನ್ನು ಕಂಡ ನೆಲೆಯಲ್ಲಿಯೂ ಕನ್ನಡದ ಹಿನ್ನೆಲೆ ಗಾಯಕರ ಸ್ಥಾನ ನಿರಂತರವಾಗಿ ಕೊರತೆಯನ್ನು ಎದುರಿಸುತ್ತಾ ಬಂದಿದೆ. (ಡಾ.ರಾಜ್ ಕುಮಾರ್ ಮಾತ್ರ ಇದಕ್ಕೊಂದು ಅಪವಾದ ಮತ್ತು ಕನ್ನಡ ಗಾಯನ ಲೋಕದ ಶ್ರೇಷ್ಠತೆಯ ಪ್ರತಿಮೆ) ಕಳೆದ ದಶಕದವರೆಗೂ ಈ ಬಗೆಯ

ಏರುಪೇರುಗಳನ್ನು ಕನ್ನಡ ಚಿತ್ರರಂಗ ಗಾಯಕರ ವಿಚಾರದಲ್ಲಿ ಎದುರಿಸುತ್ತಲೆ ಬಂದಿದೆ ಎನ್ನಬಹುದು.

ಹಾಗೆಂದ ಮಾತ್ರಕ್ಕೆ ಗಾಯಕರು ಕನ್ನಡದ ಸಿನಿಮಾಗಳ ಸಂದರ್ಭಕ್ಕೆ ಅಸಹಾಯಕರಾಗಿದ್ದಾರೆ ಎಂದರ್ಥವಲ್ಲ. ಇಂದಿಗೂ ಮತ್ತೆ ಮತ್ತೆ ನೆನಪಿಸಿ ಗುನುಗಿಸುವ ಅದ್ಭುತ ಹಾಡುಗಳನ್ನು ಗಾಯಕರು ನಮಗಿತ್ತಿದ್ದಾರೆ. ಡಿ.ಎಂ.ಸೌಂದರ್ಯ ರಾಜ್, ಶಿರ್ಕಾಳಿ ಗೋವಿಂದರಾಜ್, ಪಿ.ಬಿ.ಶ್ರೀನಿವಾಸ್, ಬಾಲಮುರಳಿ ಕೃಷ್ಣ, ಎಸ್.ಪಿ.ಬಾಲಸುಬ್ರಮಣ್ಯಂ, ಯೇಸುದಾಸ್. ಪಿ.ಸುಶೀಲ, ವಾಣಿ ಜಯರಾಂ, ಎಸ್.ಜಾನಕಿ ಹೀಗೆ ಆರಂಭವಾಗುವ ಈ ಪಟ್ಟಿ, ಇಂದಿನ ಹಿಂದಿಯ ಗಾಯಕರಾದ ಸೊನುನಿಗಂ, ಉದಿತ್ ನಾರಾಯಣ್, ಮುಂತಾದವರ ವರೆಗೂ ಮುಂದುವರೆದಿದೆ."[3]

ಪ್ರಶಾಂತ ನಾಯಕರ ಅಭಿಪ್ರಾಯವು ಕನ್ನಡ ನಾಡಿನಲ್ಲಿ ಹೆಚ್ಚು ಪ್ರಸಿದ್ಧಿಯನ್ನು ಗೆದ್ದು, ಕನ್ನಡಿಗರ ಮೆನೆ ಮಾತಾಗಿರುವ ಗಾಯಕರು, ಕನ್ನಡ ಚಲನಚಿತ್ರ ಗೀತೆಗಳನ್ನು ತಮ್ಮ ಸುಮಧುರ ಕಂಠದಿಂದ ಕೇಳುಗರಿಗೆ ಮನಮುಟ್ಟುವಂತೆ ಮಾಡಿದ್ದಾರೆ. ಕೆಲವೊಮ್ಮೆ ಈ ಹಾಡುಗಳು ಅನೇಕ ಸಿನಿಮಾಗಳ ಯಶಸ್ಸಿಗೆ ಕಾರಣವಾಗಿವೆ. ಡಾ. ರಾಜ್‌ಕುಮಾರರನ್ನು ಹೊರತುಪಡಿಸಿದರೆ ಬಹುಪಾಲು ಗಾಯಕರು ವಲಸೆ ಗಾಯಯಕರೆ. ಅವರ ಭಾಷೆ ಪ್ರಾಂತ್ಯ ಬೇರೆಯಾದರೂ ಕನ್ನಡದ ಭಾಷೆಯ ಅಭಿಮಾನದಿಂದ, ಕನ್ನಡ ಶಬ್ದಗಳ ಉಚ್ಚಾರ, ಏರಿಳಿತಗಳನ್ನು ಅರಿತು, ಕನ್ನಡ ಸಾಹಿತ್ಯಕ್ಕೆ ಮಾಧುರ್ಯವನ್ನು ನೀಡುವುದರ ಮೂಲಕ ಕನ್ನಡಾಭಿಮಾನಿಗಳ ಮನದಲ್ಲಿ ನೆಲೆಸಿದ್ದಾರೆ.

ಐವತ್ತರ ದಶಕದ ನಂತರ ಆರಂಭವಾದ ಗಾಯಕರ ಪರಂಪರೆ ಸೃಷ್ಟಿಸಿದ್ದು ಕನ್ನಡ ಚಿತ್ರರಂಗದ ಇತಿಹಾಸವೆ ಸರಿ. ಕನ್ನಡ ಸಿನಿಮಾ ಸಂಗೀತದ ಲೋಕವನ್ನು ಅಭಾದಿತವಾಗಿ ಆಳಿದರೆಂದು ಹೇಳಬಹುದು. ಕನ್ನಡಿಗರನ್ನು ಆವರಿಸಿಕೊಂಡ ಅವರ ಕಂಠಸಿರಿಯ ಹಾಡುಗಳ ಇತಿಹಾಸದ ಒಂದು ವಿಶೇಷ. ಇಂತಹ ಗಾಯಕರಲ್ಲಿ ಪಿ.ಬಿ.ಶ್ರೀನಿವಾಸ್, ಬಾಲಮುರಳಿಕೃಷ್ಣ, ಜೇಸುದಾಸ್, ಎಸ್.ಪಿ.ಬಾಲಸುಬ್ರಮಣ್ಯಂ. ಗಾಯಕಿಯರಲ್ಲಿ ಪಿ.ಸುಶೀಲ, ಎಸ್.ಜಾನಕಿ, ವಾಣಿ ಜಯರಾಮ್ ಮುಂತಾದವರು. ಈ ಮೇಲಿನ ಗಾಯಕರ ಮೋಡಿಯಿಂದ ಆಮದು ಗಾಯಕರ ಮೊರೆಹೋಗದೆ ಇರಲು ಸಾದ್ಯವಾಗಲಿಲ್ಲ, ಈ ಗಾಯಕರುಗಳ ಆ ಅವಧಿ ಒಂದು ಪರಂಪರೆಯಾಗಿ ಉಳಿದು ಬೆಳೆದು ಬಂದಿದೆ.

ಚಲನ ಚಿತ್ರಗೀತೆಗಳನ್ನು ಹೊರತುಪಡಿಸಿ, ಸಂಗೀತದ ಒಂದು ಪ್ರಕಾರವಾಗಿ ಬೆಳೆದಿರುವ, ಸುಗಮ ಸಂಗೀತದ ಭಾವಗೀತೆಗಳ ಪ್ರಪಂಚ, ಚಿತ್ರಗೀತೆಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ಈ ರೀತಿಯ ಪ್ರಯೋಗದಲ್ಲಿ ಪಿ.ಕಾಳಿಂಗರಾಯರು, ಮೈಸೂರು ಅನಂತಸ್ವಾಮಿ, ಸಿ.ಅಶ್ವಥ್, ಸುಬ್ಬಣ್ಣ ಮೊದಲಾದ ಕಲಾವಿದರು, ಹತ್ತಾರು ಶ್ರೇಷ್ಠ ಗೀತೆಗಳನ್ನು ಚಲನಚಿತ್ರಗಳಿಗೆ ನೀಡಿದ್ದಾರೆ. ಕನ್ನಡದಲ್ಲಿ ಗಾಯಕರಿಗೆ ಕೊರತೆ ಇರುವುದು ಸತ್ಯವೆನಿಸಿದರೂ, ಇರುವ ಕಲಾವಿದರನ್ನು ಗುರುತಿಸಿದರೆ ಯಾವ ಮಟ್ಟಕ್ಕೆ ಬೇಕಾದರೂ ಹಾಡಬಲ್ಲರು ಎಂಬುದಕ್ಕೆ ಸಿ.ಅಶ್ವಥ್ ರವರನ್ನು ಉದಾಹರಣೆಗೆ ನೀಡುವುದರೊಂದಿಗೆ ಜಿ.ಪ್ರಶಾಂತ ನಾಯಕರವರು ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ.

ಪರದೆಯ ಮೇಲೆ ನಟಿಸುವ ನಟ–ನಟಿಯರ ಅಭಿನಯಕ್ಕೆ ತಕ್ಕಂತೆ ಮೊದಲೇ ಸ್ಟುಡಿಯೋದಲ್ಲಿ ಹಾಡುವುದು. ಮತ್ತು ಹಾಡನ್ನು ಸ್ವತಃ ಅಲ್ಲಿ ನಟಿಸುವ ನಟರ ಧ್ವನಿಗಳಿಗೆ ಹೊಂದುವಂತೆ ಮಾಡುವುದೇ ಹಿನ್ನೆಲೆ ಗಾಯನ. ಹೀಗೆ ಸ್ಟುಡಿಯೋದಲ್ಲಿ ತಯಾರಾದ ಹಾಡುಗಳಿಗೆ ನಟರು ತಮ್ಮ ತುಟಿ ಚಲನೆಯಿಂದ ತಾವೇ ಹಾಡಿರುವಂತೆ ನಟಿಸಿ ದೃಶ್ಯರೂಪಕವಾಗಿ ತೆರೆಯ ಮೇಲೆ ಕಾಣಿಸಿಕೊಳ್ಳುತ್ತಾರೆ.

ಹಿನ್ನೆಲೆ ಗಾಯಕರಿಗೆ ಇರಬೇಕಾದ ಗುಣಲಕ್ಷಣಗಳನ್ನು ಮಾ.ನ.ಗುರುದತ್ ರವರು ತಮ್ಮ

ಚಲನಚಿತ್ರ ಗಾಯನ ಮತ್ತು ಸುಗಮ ಸಂಗೀತ ಗಾಯಕರಿಗೆ ಕೈಪಿಡಿಯಾದ ಗಾಯನ ಮಾರ್ಗದರ್ಶಿ ಎಂಬ ಕೃತಿಯಲ್ಲಿ ವಿವರಿಸಿದ್ದಾರೆ. "ಶೃತಿ ಶುದ್ದವಾಗಿರಬೇಕು, ರಾಗಗಳ ಪರಿಚಯವಿರಬೇಕು, ತಾಳ ನಿಖರವಾಗಿರಬೇಕು, ಭಾವ ಸಾಹಿತ್ಯಕ್ಕೆ ಅನುಗುಣವಾಗಿರಬೇಕು, ಸಂಗತಿಗಳೂ ಸರಾಗವಾಗಿ ನುಡಿಯಬೇಕು, ಸಂಗೀತ ನಿರ್ದೇಶಕರು ಸಂಯೋಜಿಸಿರುವ ರಾಗ ಮತ್ತು ಸ್ವರಗಳನ್ನು ಗ್ರಹಿಸಿ ಅವರ ಬೇಡಿಕೆಯಂತೆ ತಿದ್ದುಪಡಿಯನ್ನು ಅಳವಡಿಸಿಕೊಂಡು ಹಾಡುವ ಸಾಮರ್ಥ್ಯ ಹೊಂದಿರಬೇಕು, ರಾಗವನ್ನು ಉತ್ತಮ ಪಡಿಸಬೇಕು, ಕೊಟ್ಟಿರುವ ಹಾಡಿನ ಟೈಮ್ ಫ್ರೇಮ್‌ಗೆ ಸರಿಯಾಗಿ ಹಾಡುವುದು, ಹಾಡುವ ಹಾಡಿನ ಸಾಹಿತ್ಯಕ್ಕೆ ಸ್ಪಷ್ಟತೆ ಇರಬೇಕು, ಧ್ವನಿ ಇಂಪಾಗಿರಬೇಕು, ಎಲ್ಲಾ ಶೈಲಿಯ ಹಾಡುಗಳನ್ನು ಹಾಡುವುದು, ಮಂದ್ರಸ್ಥಾಯಿ ಪಂಚಮದಿಂದ ತಾರ ಸ್ಥಾಯಿ ಪಂಚಮದ ವರೆಗೂ ಹಾಡುವ ಹಾಗೆ ಅಭ್ಯಾಸ ಮಾಡುವುದು, ನಟ–ನಟಿಯರ ಧ್ವನಿಗೆ ಹೊಂದುವ ಹಾಗೆ ಹಾಡುವುದು, ಗಾಯಕರಿಗೆ ತಾಳ್ಮೆ ಇರಬೇಕು, ಇತರ ಭಾಷೆಗಳನ್ನು ಕಲಿಯುವುದು, ಪ್ರಸಿದ್ದಿ ಹೊಂದಿರುವ(ಅನುಭವವುಳ್ಳ), ಹೊಂದುತ್ತಿರುವ ಗಾಯಕರ ಮಾರ್ಗದರ್ಶನ ಅಥವಾ ಅವರ ಯಶಸ್ಸಿಗೆ ಅನುಸರಿಸಿದ ಗಾಯನದ ಬಗೆಗಿನ ತಾಂತ್ರಿಕ ಅಂಶಗಳನ್ನು ತಿಳಿದುಕೊಳ್ಳುವುದು, ಉಸಿರಾಟದ ಮೇಲೆ ನಿಯಂತ್ರಣ ಇರಬೇಕು, ಸತತ ಅಭ್ಯಾಸ."[3]

ಈ ಮೇಲಿನ ಅಂಶಗಳು ಹಿನ್ನೆಲೆ ಗಾಯಕರು ಹೊಂದಿರಬೇಕು ಎಂಬುದನ್ನು ಮಾ.ನ.ಗುರುದತ್ ರವರು ಸ್ವತಃ ಅವರು ಸಂಗೀತ ನಿರ್ದೇಶಕರಾಗಿ ಅಭಿಪ್ರಾಯಪಟ್ಟಿದ್ದಾರೆ. ಯಾವುದೇ ಸಂಗೀತ ಸಂಯೋಜಕರಾಗಲಿ ತಮ್ಮ ಗೀತೆಗಳು ಚಲನಚಿತ್ರಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸಿ ಯಶಸ್ವಿಗೊಳಿಸಬೇಕು ಎಂಬ ಆಶಯವನ್ನು ಹೊಂದಿರುತ್ತಾರೆ. ಈ ನಿಟ್ಟಿನಲ್ಲಿ ತಮ್ಮ ಸಂಯೋಜನೆಯ ಹಾಡುಗಳನ್ನು ಹಾಡುವ ಗಾಯಕರನ್ನು ಹುಡುಕುವಾಗ ಮೇಲಿನ ಅಂಶಗಳನ್ನು ಹೊಂದಿರಬೇಕು ಎಂದುಕೊಳ್ಳುತ್ತಾರೆ. ಆಗ ಮಾತ್ರ ಅವರು ಗೀತೆಗಳಿಗೆ ಜೀವ ತುಂಬಿ, ಭಾವ ತುಂಬಿ ಹಾಡಿನ ರಾಗಗಳಿಗೆ ನ್ಯಾಯ ಒದಗಿಸಬಹುದು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಹಿನ್ನೆಲೆ ಗಾಯನ ಆರಂಭವಾದ ಮೇಲೆ ಚಿತ್ರರಂಗದಲ್ಲಿ ಆದ ಬದಲಾವಣೆಯನ್ನು ಡಾ.ನಾಗೇಂದ್ರರವರು ತಮ್ಮ ಸಿನಿಮಾ ಜಗತ್ತು ಕೃತಿಯಲ್ಲಿ "ಚಲನಚಿತ್ರ ನಿರ್ಮಾಣದಲ್ಲಿ ಧ್ವನಿ ಮತ್ತು ಹಾಡುಗಳು ಮುಖ್ಯವಾಗಿರುತ್ತವೆ. ಧ್ವನಿ ಇಲ್ಲದೆ ಚಿತ್ರ ನಿರ್ಮಾಣವೂ ಒಂದು ಕಾಲದಲ್ಲಿತ್ತು. ಚಲನಚಿತ್ರಗಳ ಚಿತ್ರೀಕರಣದ ಆರಂಭದ ದಿನಗಳಲ್ಲಿ ಧ್ವನಿ ಇಲ್ಲದೇ ಚಿತ್ರಗಳು ನಿರ್ಮಾಣವಾಗುತ್ತಿದ್ದವು. ದಿನಗಳು ಕಳೆದಂತೆ ಧ್ವನಿ ಅಳವಡಿಕೆಯ ತಂತ್ರಜ್ಞಾನವನ್ನು ಕಂಡು ಹಿಡಿದರು. ಅನಂತರ ಧ್ವನಿ ಆಧಾರಿತ ಚಿತ್ರ ನಿರ್ಮಾಣವಾಗತೊಡಗಿದವು" ಎಂದು ವಿವರಿಸಿದ್ದಾರೆ.

ಕೆಲವಾರು ವರ್ಷಗಳಲ್ಲಿ ಹಿನ್ನೆಲೆ ಗಾಯನದಿಂದ ಹಾಡುಗಳನ್ನು ಅಳವಡಿಸಲಾಂಭಿಸಿದರು. ಇದು ಆ ದಿನಗಳಲ್ಲಿ ಚಲನಚಿತ್ರದಲ್ಲಿ ಒಂದು ಕ್ರಾಂತಿಕಾರಕ ಬದಲಾವಣೆಯೆಂದೆ ಹೇಳಬಹುದು. ಆರಂಭದ ದಿನಗಳಲ್ಲಿ ಚಲನಚಿತ್ರಗಳ ಧ್ವನಿ ಅಳವಡಿಕೆಯು ಒಂದು ಕುತೂಹಲಕರವಾದ ವಿಚಾರವೆಂದೆ ಹೇಳಬಹುದು. ಛಾಯಾಗ್ರಹಣ ಮತ್ತು ಧ್ವನಿ ಮುದ್ರಣವು ನಿಯಮಗಳ ಸಂಯೋಜನೆಯಿಂದ ನಡೆಸಲಾಗುತ್ತಿತ್ತು. ಚಲನಚಿತ್ರಗಳ ಆರಂಭದಲ್ಲಿ ಮೂಖಿ ಚಿತ್ರಗಳನ್ನು ಪರದೆಯ ಮೇಲೆ ತೋರಿಸುವಾಗ ಜನರ ಮನರಂಜನೆಗಾಗಿ ಪರದೆಯ ಪಕ್ಕದಲ್ಲಿ ಅಥವಾ ಹಿಂಬದಿಗಳಲ್ಲಿ ವಾದ್ಯವೃಂದಗಳನ್ನು ಅಲ್ಲಲ್ಲಿ ನಡೆಸುತ್ತಿದ್ದರು. ಚಿತ್ರಗಳು ಅರ್ಥವಾಗಲೆಂಬ ಉದ್ದೇಶದಿಂದ ಪರದೆಯ ಪಕ್ಕದಲ್ಲಿ ಒಬ್ಬ ಚಿತ್ರಗಳ ವಿವರ ಹಾಗೂ ಪಾತ್ರಧಾರಿಗಳ ಸಂದರ್ಭಗಳ ಸಂಭಾಷಣೆಯನ್ನು ವಿವರಿಸುತ್ತಿದ್ದನು. ಪರದೆಯ ಮೇಲೆ ಬರೆದಿರುವ ವಿವರಗಳನ್ನು ಗಟ್ಟಿಯಾಗಿ

ಓದುತ್ತಿದ್ದ. ಆನಂತರದ ದಿನಗಳಲ್ಲಿ ಗ್ರಾಮಾ ಫೋನ್‌ಗಳನ್ನು ಚಿತ್ರ ವಿವರಗಳನ್ನು ನೀಡಲು ಮತ್ತು ಸಂಗೀತ–ಸಂಭಾಷಣೆಗಳನ್ನು ಅಳವಡಿಸಲು ಬಳಕೆ ಮಾಡಲಾರಂಭಿಸಿದರು."[4]

ಹಿನ್ನೆಲೆ ಗಾಯಕರು, ಹಿನ್ನೆಲೆ ಗಾಯನದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ತಮ್ಮ ಜೀವವನ್ನೆ ಮುಡಿಪಾಗಿ ಇಟ್ಟಿದ್ದಾರೆ. ಅನೇಕ ಕಷ್ಟಗಳನ್ನು ಅನುಭವಿಸಿ, ಕೇವಲ ಸಂಗೀತದ ಮೇಲಿನ ಪ್ರೀತಿಯಿಂದ ಅದೆಷ್ಟೋ ಕಠಿಣ ಪರಿಶ್ರಮ ವಹಿಸುತ್ತಾರೆ ಎನ್ನುವುದರ ಕುರಿತು, ಪ್ರಸಿದ್ದ ಶಾಸ್ತ್ರೀಯ ಸಂಗೀತದ ಗಾಯಕಿ ಪ್ರಭಾ ಅತ್ರೆ ಅವರು ತಮ್ಮ 'ಶ್ರೋತೃವಿಗೆ ಅರಿವು' ಪುಸ್ತಕದಲ್ಲಿ ಹೀಗೆ ವಿವರಿಸಿದ್ದಾರೆ.

"ಚಲನಚಿತ್ರ ಸಂಗೀತದಂತೆಯೆ ಪ್ರತಿ ಸಂಗೀತಕ್ಕೂ ತನ್ನದೇ ವ್ಯಾಕ್ಯರಣ, ಶಿಸ್ತು ಮತ್ತು ತಂತ್ರ ಇರುತ್ತದೆ. ಹಿನ್ನೆಲೆ ಗಾಯನ ಕೈಗೊಳ್ಳುವುದು ಅಷ್ಟೇನು ಸುಲಭವಲ್ಲ. ಸೂಕ್ಷ್ಮವರ್ಧಕ(Microphone)ದ ಎದುರು ನಿಲ್ಲುವ ಮುನ್ನ ಚೆನ್ನಾಗಿ ತರಬೇತಿ ಪಡೆದು, ಶಾಸ್ತ್ರೀಯ ಸಂಗೀತಗಾರನು ನೂರು ಬಾರಿ ಆಲೋಚಿಸಬೇಕಾಗುತ್ತದೆ. ಕಿವಿಗೆ ಚಲನಚಿತ್ರ ಸಂಗೀತ ಹಗುರವಾದರೂ ಅದರ ತಂತ್ರ ಸರಳವಾದುದ್ದೇನೂ ಅಲ್ಲ."[5] ಈ ರೀತಿಯಾಗಿ ಅವರು ಚಿತ್ರದಲ್ಲಿ ಬರುವ 3 ಅಥವಾ 5 ನಿಮಿಷದ ಗೀತೆಗೆ ಎಷ್ಟೋ ಸಮಯವನ್ನು ಮೀಸಲಿಟ್ಟು , ತರಬೇತಿ ಪಡೆದು ಜೀವ ತುಂಬಿ, ಕೇಳುಗರ ಕಿವಿಗಳಿಗೆ ಮಧುರತೆಯ ಆನಂದವನ್ನು ನೀಡುತ್ತಾರೆ. ಎಂಬುದನ್ನು ವಿವರಿಸಿ, ಹಿನ್ನೆಲೆ ಗಾಯನಕ್ಕೆ ಎಷ್ಟು ಶಾಸ್ತ್ರೀಯ ಸಂಗೀತದ ತರಬೇತಿ ಪಡೆದರು ಅದು ಸುಲಭದ ಕೆಲಸವಲ್ಲ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಅನೇಕ ಸಂಗೀತ ನಿರ್ದೇಶಕರು ಮತ್ತು ಗಾಯಕರು ಈ ರೀತಿಯ ಸವಾಲುಗಳನ್ನು ಎದುರಿಸಿ, ಕನ್ನಡ ಚಿತ್ರಗೀತೆಗಳ ಪರಂಪರೆಗೆ ಶಾಸ್ತ್ರೀಯ ಸಂಗೀತ ಶೈಲಿಯ ರಾಗಾಧಾರಿತ ಗೀತೆಗಳನ್ನು ಕೊಡುಗೆಯಾಗಿ ನೀಡಿದ್ದಾರೆ.

**ಕೊನೆಟಿಪ್ಪಣಿಗಳು**

1. ಪ್ರಶಾಂತ್ ನಾಯಕ್ ಜಿ. (2009). *ಕನ್ನಡ ಸಿನಿಮಾ ಲೋಕ.* ರಚನಾ ಪ್ರಕಾಶನ. ಪು.121
2. ನಾಗೇಂದ್ರ. (2017). *ಸಿನಿಮಾ ಜಗತ್ತು.* ಶ್ರೀ ಚನ್ನಕೇಶವ ಪ್ರಕಾಶನ. ಪು.73,74)
3. ಗುರುದತ್ ಮಾ.ನ. (2015). *ಗಾಯನ ಮಾರ್ಗದರ್ಶಿ.* ಸೂರಜ್ ಪ್ರಕಾಶನ, ಪು.123,124
4. ನಾಗೇಂದ್ರ. (2017). *ಪೂರ್ವೋಕ್ತ.* ಪು.67
5. ಪ್ರಭಾ ಅತ್ರೆ. (2012). *ಶ್ರೋತೃವಿಗೆ ಅರಿವು.* ಕಣ್ವ ಪ್ರತಿಷ್ಠಾನ.

**ಪರಾಮರ್ಶನ ಗ್ರಂಥಗಳು**


- ಭರತ್ ರೆಡ್ಡಿ. *ಕನ್ನಡ ಚಲನಚಿತ್ರ ಗೀತೆಗಳು ಒಂದು ಸಮಗ್ರ ಅಧ್ಯಯನ.* ಅಪ್ರಕಟಿತ ಸಂಶೋಧನಾ ಪ್ರಬಂಧ. ಕನ್ನಡ ವಿಶ್ವವಿದ್ಯಾಲಯ.
- ಗಂಗಾಧರ್ ಮೊದಲಿಯಾರ್. (1998). *ಕನ್ನಡ ಸಿನಿಮಾ ಇತಿಹಾಸ.* ಕನ್ನಡ ಪುಸ್ತಕ ಪ್ರಾಧಿಕಾರ.
- ಗೌರಿಸುಂದರ್. (2006). *ಕಲಾ ಕಂಠೀರವ ಡಾ. ರಾಜ್ ಕುಮಾರ್.* ಸುಂದರ ಪ್ರಕಾಶನ.
- ಜಯಂತ್ ಕಾಯಿಕಿಣಿ. (2013). *ಟೂರಿಂಗ್ ಟಾಕೀಸ್.* ಮನೋಹರ ಗ್ರಂಥಮಾಲಾ.